ಓದುಗರಿಗೂ ಸುಗ್ಗಿ ಕಾಲ

ಸುಧಾ

ಯುಗಾದಿ ವಿಶೇಷಾಂಕ-2026

ಓದುಗರ ಸಹಭಾಗಿತ್ವ ಇಲ್ಲದೆ 'ಯುಗಾದಿ ಸಂಚಿಕೆ' ಕಳೆಗಟ್ಟುವುದು ಹೇಗೆ? ಇದೋ ಇಲ್ಲಿದೆ, ಓದುಗರ ಅಭಿವ್ಯಕ್ತಿಗೊಂದು ಆಹ್ವಾನ. 2026ರ 'ಸುಧಾ' ಯುಗಾದಿ ವಿಶೇಷಾಂಕಕ್ಕಾಗಿ ಓದುಗರ ವೇದಿಕೆಗೆ ಎರಡು ವಿಷಯಗಳನ್ನು ಸೂಚಿಸಲಾಗಿದೆ.

ಓದುಗರ ವೇದಿಕೆ







ಬದುಕು ಬದಲಿಸಿದ ಪುಸ್ತಕ

- ಬರಹಗಳು 250 ಶಬ್ದ ಮೀರದಿರಲಿ.
- ಸ್ಪರ್ಧೆಗೆ ಕಳುಹಿಸುವ ಬರಹಗಳು ಪತ್ರಿಕೆ, ನಿಯತಕಾಲಿಕೆ, ಬ್ಲಾಗ್, ಜಾಲತಾಣ, ಸಾಮಾಜಿಕ ಜಾಲತಾಣ ಸೇರಿದಂತೆ ಯಾವುದೇ ಮಾಧ್ಯಮದಲ್ಲಿ ಈ ಮೊದಲು ಪ್ರಕಟಗೊಂಡಿರಬಾರದು.
- ಬರಹದ ಜೊತೆಯಲ್ಲಿ ಪ್ರತ್ಯೇಕ ಹಾಳೆಯಲ್ಲಿ ವಿಳಾಸ, ದೂರವಾಣಿ ಸಂಖ್ಯೆ ಬರೆಯಿರಿ. ಜೊತೆಗೆ ನಿಮ್ಮ ಫೋಟೊ ಕೂಡ ಇರಲಿ.
- ಲಕೋಟೆ ಮೇಲೆ ಅಥವಾ ಇಮೇಲ್‌ನಲ್ಲಿ 'ಯುಗಾದಿ ಓದುಗರ ವೇದಿಕೆ'ಗೆ ಎಂದು ನಮೂದಿಸಿ.
- 'ದಿ ಪ್ರಿಂಟರ್ಸ್ ಮೈಸೂರು ಪ್ರೈವೇಟ್ ಲಿಮಿಟೆಡ್' ಸಿಬ್ಬಂದಿ ಮತ್ತು ಅವರ ಕುಟುಂಬ ವರ್ಗದವರು ಸ್ಪರ್ಧೆಯಲ್ಲಿ ಭಾಗವಹಿಸುವಂತಿಲ್ಲ.
- ನುಡಿ–ಯುನಿಕೋಡ್‌ನಲ್ಲಿ ಪ್ರಬಂಧಗಳನ್ನು ಇ–ಮೇಲ್ ಮಾಡಬಹುದು.

ಕೊನೆಯ ದಿನಾಂಕ
ಜನವರಿ 20, 2026

ವಿಳಾಸ: ಸಂಪಾದಕರು,
ಸುಧಾ ಯುಗಾದಿ ವಿಶೇಷಾಂಕ, ಓದುಗರ ವೇದಿಕೆ,
ನಂ. 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು 560001

ಇ–ಮೇಲ್: ugadi@sudha.co.in



'ಅಂತಾದ್ದೇನಾಗಿಲ್ಲ. ನೀನು ಗಾಬರಿ ಮಾಡ್ಕಂಬಾರ್ದು'.

'ಏನಾಯ್ತು? ಏನಾಯ್ತು ಅಪ್ಪಾ?'

'ರಾತ್ರಿ ಎದ್ದೋಳು ಬಚ್ಚಲಲ್ಲಿ ಬಿದ್ಬಿಟ್ಟಿದಾಳೆ. ಬೆಳಗಾದ ಮೇಲೇ ನಂಗೆ ಗೊತ್ತಾಗಿದ್ದು'

ಅಯ್ಯೋ'

'ಹೆದರ್ಕೋಬೇಡ. ಕೂರೋ ಜಾಗದಲ್ಲಿ ಮೂಳೆ ಮುರಿದಿದೆಯಂತೆ. ಸಣ್ಣದೊಂದು ಆಪರೇಷನ್ ಆಯ್ತು. ಏನು ಟ್ರೀಟ್ಮೆಂಟ್ ಆಗ್ಬೇಕೋ ಎಲ್ಲಾ ನಡೀತಿದೆ...'

'ಈಗ ಹೇಳ್ತಿದೀರಲ್ಲ ಅಪ್ಪ? ಇದೆಂತಾ ಗ್ರಾಚಾರ. ನಾನು ತಕ್ಷಣ ಹೊರಟು ಬರ್ತೀನಿ...'

'ಬೇಡ ಕಂದಾ, ನಾನಿದೀನಲ್ಲ, ನೋಡ್ಕಂತೀನಿ. ಮಗಳ ಪರೀಕ್ಷೆ ಮುಗಿಯೋವರೆಗೆ ನೀನು ಆ ಕಡೆ ಗಮನ ಕೊಡ್ಬೇಕು. ಎಸ್ಸೆಸ್ಸೆಲ್ಸಿ ಅಲ್ವಾ? ಯಾವ ಕಾರಣಕ್ಕೂ ಅವಳಿಗೆ ತೊಂದರೆ ಆಗೋದು ಬೇಡ.'

'ನೀವೊಬ್ರೇ ಹೇಗೆ ನಿಭಾಯಿಸ್ತೀರಿ ಅಪ್ಪಾ? ಅಮ್ಮ ಎದ್ದು ಓಡಾಡೋಕೆ ತಿಂಗಳುಗಟ್ಲೆ ಬೇಕಾಗುತ್ತೇನೋ? ಎಲ್ಲಾ ಸರಿಯಾಗುತ್ತಂತಾ ಅಪ್ಪ? ಅಮ್ಮ ಮೊದಲಿನ ಹಾಗೆ ಎದ್ದು ಓಡಾಡ್ತಾಳಲ್ವಾ?'

'ಅಳಬೇಡ, ಅಳಬೇಡ ನೀನು. ಎಲ್ಲಾ ಸರಿಯಾಗುತ್ತೆ'.

'ಅಲ್ಲೀವರೆಗೆ? ಅಡುಗೆಮನೆಗೆ ಹೋಗಿ ಅಭ್ಯಾಸಾನೇ ಇಲ್ಲ ನಿಮಗೆ'

'ಬ್ಯಾಂಕು ಗೀಂಕಿಗೆ ನಂಜೊತೆ ಬಾ, ಒಂದಿಷ್ಟು ದುಡ್ಡಿನ ವ್ಯವಹಾರ ಕಲಿ ಅಂತ ನಿಮ್ಮಮ್ಮಂಗೆ ಹೇಳ್ತಿದ್ದೆ. ಅಡುಗೆ ಮನೇಗೆ ಬನ್ನಿ. ಕೊನೇ ಪಕ್ಷ ಕಾಫಿ ಮಾಡೋದಾದ್ರೂ ಕಲೀರಿ ಅಂತ ನಿಮ್ಮಮ್ಮ ಹೇಳ್ತಿದ್ಲು. ಇಂಥದ್ದೆಲ್ಲಾ ಗೊತ್ತಿರ್ಬೇಕು ಅಂತ ಎಲ್ಲೋ ಓದಿದ್ದು ಕಣೇ. ಈಗ ಅದರ ಸತ್ಯ ಅರ್ಥ ಆಗ್ತಿದೆ.'

'ಮಾತು ಮರೆಸ್ತಿದೀರಿ ಅಪ್ಪ. ನಿಮ್ಮನ್ನ ನೆನೆಸ್ಕೊಂಡ್ರೆ ನಂಗೆ ಸಂಕಟ ಆಗ್ತಿದೆ. ಏನಾದ್ರಾಗ್ಲಿ, ನಾನು ಬಂದ್ಬಿಡ್ತೀನಿ'.

'ಬೇಡ ಅಂದ್ರೆ ಬೇಡ. ನಿಂಗೆ ವಿಷಯ ಗೊತ್ತಿರ್ಲಿ ಅಂತ ಹೇಳಿದ್ದು. ನಿಮ್ಮಮ್ಮನ್ನ ನಾನು ನೋಡ್ಕಂತೀನಿ. ತೀರಾ ಬೇಕು ಅಂದ್ರೆ ಕೇಟರಿಂಗ್ ಅಂತೂ ಇರುತ್ತೆ. ನೋಡ್ಕಳ್ಳೋಕೆ ಜನಾನೂ ಸಿಗ್ತಾರೆ'.

'ಆದ್ರೂ ಅಪ್ಪಾ.'

'ಅಳ್ಬೇಡ ಅಂತ ಹೇಳ್ಲಿಲ್ವಾ? ಇಷ್ಟು ವರ್ಷ ನಿಮ್ಮಮ್ಮ ನನ್ನ ನೋಡ್ಕಂಡ್ಲು. ಈಗ ನನ್ನ ಸರದಿ. ನನ್ನ ಜವಾಬ್ದಾರಿ. ಇದೂ ಒಂಥರಾ ಪರೀಕ್ಷೇನೇ ಕಂದಾ. ಗೊತ್ತಿಲ್ದೆ ಇರೋದನ್ನ ಕಲೀಬೇಕಾಗುತ್ತೆ. ಕಷ್ಟಪಡ್ಬೇಕಾಗುತ್ತೆ.'

'ಏನೇನೋ ಮಾತಾಡ್ತಿದೀರಿ ಅಪ್ಪಾ, ಹೆದರಿಕೆಯಾಗುತ್ತೆ ನಂಗೆ.'

'ಬಂದಿದ್ದನ್ನ ಎದುರಿಸ್ಲೇಬೇಕು ಅಂದಾಗ ಧೈರ್ಯವಾಗಿ ಎದುರಿಸ್ಬೇಕಲ್ವಾ? ಹೆದರಿಕೊಂಡ್ರೆ ಬಂದ ಕಷ್ಟ ದೂರ ಆಗ್ಬಿಡುತ್ತಾ?'

'ಫೋನ್ ಕೊಡಿ ಅಮ್ಮಂಗೆ. ನಾನು ಮಾತಾಡ್ಬೇಕು.'

'ಅವಳಿಗೆ ಇನ್ನೂ ಮಂಪರು. ಎಚ್ಚರ ಬಂದ್ಮೇಲೆ ಮಾತಾಡಿಸ್ತೀನಿ ಆಯ್ತಾ? ಧೈರ್ಯವಾಗಿರ್ಬೇಕು ನೀನು.'

'ನೀವೂ', ಮಗಳು ಗದ್ಗದಿಸಿದರೆ ಅವಳಿಗೆ ಸುದ್ದಿ ದಾಟಿಸುವ ಕಡುಕಷ್ಟದ ಕೆಲಸ ಪೂರೈಸಿದ ಅಪ್ಪ ತಮ್ಮಲ್ಲಿ ತಾವೇ ಧೈರ್ಯವನ್ನು ಆವಾಹಿಸಿಕೊಳ್ಳುವ ಪ್ರಯತ್ನವೆಂಬಂತೆ ಎದೆಯ ಮೇಲೆ ಕೈಯಿಟ್ಟುಕೊಂಡು ನಿಡಿಯುಸಿರೆಳೆದರು.

ಪ್ರತಿಕ್ರಿಯಿಸಿ: feedback@sudha.co.in